ಇತ್ತೀಚಿನ ಭಾವಚಿತ್ರ ಅಂಟಿಸಿ ಅದರ ಮೇಲೆ ಸಹಿ ಮಾಡಬೇಕು.

# ಅರ್ಜಿ ನಮೂನೆ

**ಪ್ರವಾಸೋದ್ಯಮ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ**
**2018-19 ನೇ ಸಾಲಿನ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗ(OBC)**
**ಯೋಜನೆ ಅಡಿ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಸೌಲಭ್ಯ ಕೋರಿ ಅರ್ಜಿ**

ಜಾತಿ:__________ ಉಪ ಜಾತಿ__________
ಕ್ರ.ಸಂ: ______

| | | |
|---|---|---|
| 1. | ಅಭ್ಯರ್ಥಿಯ ಹೆಸರು<br>(SSLC ಅಂಕಪಟ್ಟಿಯಲ್ಲಿ ಇರುವಂತೆ)<br><br>ತಂದೆಯ ಹೆಸರು<br><br>ಪೂರ್ಣ ವಿಳಾಸ | |
| 2. | ದೂರವಾಣಿ / ಮೊಬೈಲ್ ಸಂಖ್ಯೆ ನಮೂದಿಸುವುದು ಕಡ್ಡಾಯ. | |
| 3. | ಇ-ಮೇಲ್ ವಿಳಾಸ (ಲಭ್ಯವಿದ್ದಲ್ಲಿ) | |
| 4. | ತಹಶೀಲ್ದಾರರು, ಮಹಾನಗರಪಾಲಿಕೆ / ನಗರ ಸಭೆ/ಪುರಸಭೆ/ಗ್ರಾಮ ಪಂಚಾಯತಿ/ಪಟ್ಟಣ ಪಂಚಾಯಿತಿ- ಗಳಿಂದ ಪಡೆದಿರುವ ವಾಸಸ್ಥಳದ ದೃಢೀಕರಣ ಪತ್ರದ ಪ್ರತಿ. | |
| 5. | ವಿಧಾನಸಭಾ ಮತಕ್ಷೇತ್ರದ ಹೆಸರು | |
| 6. | ಜಾತಿ / ಉಪಜಾತಿ:<br>(ತಹಶೀಲ್ದಾರರಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.) | |
| 7. | ಕುಟುಂಬದ ವಾರ್ಷಿಕ ಆದಾಯ<br>(ತಹಶೀಲ್ದಾರರಿಂದ ಪಡೆದ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರದ ಪ್ರತಿ.) | |
| 8. | ಅಭ್ಯರ್ಥಿಯ ನಿರುದ್ಯೋಗಿ ಪ್ರಮಾಣ ಪತ್ರ.<br>(ಅರ್ಜಿದಾರರು ಕೇಂದ್ರ, ರಾಜ್ಯ ಸರ್ಕಾರ, ಸರ್ಕಾರದ ನಿಗಮ ಮಂಡಳಿಗಳಲ್ಲಿ ಖಾಯಂ ಉದ್ಯೋಗ ಹೊಂದಿರದ ಬಗ್ಗೆ, ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪ್ರಸಕ್ತ ಸಾಲಿನ ಪ್ರಮಾಣ ಪತ್ರದ ದೃಢೀಕೃತ ಪ್ರತಿ.) | |
| 9. | ಪಡಿತರ ಚೀಟಿ(ಬಿ.ಪಿ.ಎಲ್. ಕಾರ್ಡದಾರರಿಗೆ ಆದ್ಯತೆ) | |

| | | |
|---|---|---|
| 10. | ಆಧಾರ ಕಾರ್ಡ ಪ್ರತಿ ಹಾಗೂ ಚುನಾವಣಾ ಗುರುತಿನ ಚೀಟಿ ಪ್ರತಿ | |
| 11. | ಎಲ್.ಎಂ.ವಿ. ಲೈಸೆನ್ಸ್ ಹಾಗೂ ಕ್ಯಾಬ್ ಬ್ಯಾಡ್ಜ್ ಹೊಂದಿರುವ ಬಗ್ಗೆ ಆರ್.ಟಿ.ಓ.(RTO) ಕಛೇರಿಯಿಂದ ಪ್ರಸ್ತುತ ಪಡೆದಿರುವ ಡಿ.ಎಲ್. ಎಕ್ಸಟ್ರಾಕ್ಟ್ ಪ್ರತಿ. | |
| 12. | ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇರುವಂತೆ) :<br>ವಯಸ್ಸು (ಅರ್ಜಿದಾರರು 20 ರಿಂದ 40 ವರ್ಷದೊಳಗಿರಬೇಕು.) : | |
| 13. | ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರುವ ಬಗ್ಗೆ ಪಡೆದಿರುವ ಅಂಕಪಟ್ಟಿಯ ಪ್ರತಿ ಹಾಗೂ ಪಡೆದ ಅಂಕಗಳ ಶೇಕಡಾವಾರು(%) | |
| 14. | ಅರ್ಜಿದಾರರು ತಮ್ಮ ವಿಳಾಸದ ವ್ಯಾಪ್ತಿಗೆ ಒಳಪಡುವ (ಸರ್ವೀಸ್ ಏರಿಯಾ) ಬ್ಯಾಂಕ್‌ನಲ್ಲಿ (ರಾಷ್ಟ್ರೀಕೃತ ಬ್ಯಾಂಕ್) ಖಾತೆಯನ್ನು ತೆರೆದಿದ್ದರೆ ಪಾಸ್ ಪುಸ್ತಕ ಪ್ರತಿ. | |
| 15. | ಅರ್ಜಿದಾರರು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದ ಬಗ್ಗೆ, ವಿಜಯಪುರ ಮಹಾನಗರ ಪಾಲಿಕೆ/ನಗರ ಸಭೆ / ಪುರಸಭೆ/ಗ್ರಾಮಪಂಚಾಯತಿ/ಪಟ್ಟಣ ಪಂಚಾಯತಿ ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಸ್ವಯಂ ಪ್ರಮಾಣೀಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ(Affidavit)ದಲ್ಲಿ ನಮೂನೆ-03 ರಂತೆ ಸಿದ್ಧಪಡಿಸಿದ ಮುಚ್ಚಳಿಕೆ ಪತ್ರ. | |
| 16. | ಅರ್ಜಿದಾರರು ಕಲಿತಿರುವ ಭಾಷೆಗಳು( ✓ ಚಿಹ್ನೆಯಿಂದ ಗುರುತಿಸಿ)<br>ಕನ್ನಡ :<br>ಹಿಂದಿ :<br>ಇಂಗ್ಲೀಷ್ :<br>ತೆಲುಗು : | ಓದಲು: ☐ ☐ ☐ ☐ ಬರೆಯಲು: ☐ ☐ ☐ ☐ ಮಾತನಾಡಲು; ☐ ☐ ☐ ☐ |

** **ಅಭ್ಯರ್ಥಿಯು ಮೇಲಿನ ಎಲ್ಲಾ ದಾಖಲಾತಿಗಳನ್ನು ದ್ವಿಪ್ರತಿಯಲ್ಲಿ ಲಗತ್ತಿಸಿ ಸ್ವಯಂದೃಢೀಕರಿಸಿ ಸಲ್ಲಿಸತಕ್ಕದ್ದು.**

**ಮೇಲಿನ ಅರ್ಜಿ ನಮೂನೆಯಲ್ಲಿ ನೀಡಿರುವ ಎಲ್ಲ ಮಾಹಿತಿಗಳು ನೈಜತೆಯನ್ನು ಹೊಂದಿವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.**

**ಸ್ಥಳ:**

**ದಿನಾಂಕ:** **ಅಭ್ಯರ್ಥಿಯ ಸಹಿ**

ಇ-ಮೇಲ್: adtourismcbpur@gmail.com

ದೂರವಾಣಿ ಸಂ: 08156-277041

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಕಾರ್ಯಾಲಯ,

| ಸಂಖ್ಯೆ: ಪ್ರಇ/ಸನಿ/ಚಿಬಪುರ/5-6/2018-19 | ದಿನಾಂಕ:20/06/2018 |
|---|---|

## <u>ಅಧಿಸೂಚನೆ</u>

**ವಿಷಯ:** 2018-19ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯ ಧನವನ್ನು ಒದಗಿಸುವ ಯೋಜನೆಗೆ ಅರ್ಜಿಯನ್ನು ಆಹ್ವಾನಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಪ್ರಇ 297 ಪ್ರವಾಯೋ 2016 ದಿ:02.11.2016
2. 2018-19ನೇ ಸಾಲಿನಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಆದೇಶ ಸಂ:ಪ್ರಿ/122/ಪ್ರವಾಯೋ/2018 ದಿನಾಂಕ:29.05.2018
3. ಮಾನ್ಯ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು. ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಪ್ರಇ/ಯೋ-1/4-5/2017-18 ದಿನಾಂಕ:31.05.2018

********

ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಇಲಾಖೆ ವತಿಯಿಂದ 2018-19ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ಒಟ್ಟು "10" ಅರ್ಹ ನಿರುದ್ಯೋಗಿ ಯುವಕ / ಯುವತಿಯರಿಗೆ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ,ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸುವ ಯೋಜನೆಗೆ ಉಲ್ಲೇಖ(1) ರಲ್ಲಿ ಆದೇಶವಾಗಿರುವಂತೆ, ಉಲ್ಲೇಖ(2) ಮತ್ತು (3)ರ ಪ್ರಕಾರ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯ ಧನವನ್ನು ಒದಗಿಸುವ ಯೋಜನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವಾಸಿ ಟ್ಯಾಕ್ಸಿ ಖರೀದಿಸಲು ತಗುಲುವ ಒಟ್ಟು ವೆಚ್ಚದಲ್ಲಿ ಗರಿಷ್ಠ **ರೂ.3.00 ಲಕ್ಷಗಳ** ಸಹಾಯಧನ ಮೊತ್ತವನ್ನು ಇಲಾಖೆಯಿಂದ ನೀಡಲಾಗುವುದು, **ಶೇ.5 ರಷ್ಟು ಬೀಜಧನವನ್ನು ಅಭ್ಯರ್ಥಿಯೇ** ಭರಿಸುವುದು ಹಾಗೂ ಉಳಿದ ಮೊತ್ತವನ್ನು ರಾಷ್ಟ್ರೀಕೃತ/ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲವನ್ನು ಫಲಾನುಭವಿಯು ಪಡೆದುಕೊಳ್ಳಬೇಕಾಗಿರುತ್ತದೆ.

## <u>ಮಾರ್ಗಸೂಚಿಗಳು.</u>

### I. <u>ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು:</u>

1. ಅರ್ಜಿದಾರರು ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.
2. ಅರ್ಜಿದಾರರು 20 ರಿಂದ 40 ವರ್ಷದೊಳಗಿರಬೇಕು.
3. ಅರ್ಜಿದಾರರು ಕಡ್ಡಾಯವಾಗಿ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
4. ಅಭ್ಯರ್ಥಿಗಳು ಲಘುವಾಹನ ಚಾಲನಾ ಪರವಾನಿಗೆ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು, ಅಭ್ಯರ್ಥಿಗಳು ವಾಹನ ಪರವಾನಿಗೆಯೊಂದಿಗೆ **ಕ್ಯಾಬ್ ಬ್ಯಾಡ್ಜ್** ಹೊಂದಿರುವುದು ಕಡ್ಡಾಯವಾಗಿರುತ್ತದೆ.
5. ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.55,000/- ಗಳನ್ನು ಮೀರಿರಬಾರದು.
6. ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ. 40,000/- ಮೀರಿರಬಾರದು.
7. ಅರ್ಜಿದಾರರು ಕಡ್ಡಾಯವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿಯಾಗಿರಬೇಕು.
8. ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.
9. ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಲಾಗುವುದಿಲ್ಲ. ಒಂದು ವೇಳೆ ಆ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಪಡಿತರ ಚೀಟಿಯ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ.
10. **ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ಶೇ.15 ರಷ್ಟು ಗುರಿ** ಮೀಸಲಿರಿಸಲಾಗಿದೆ. ಒಂದು ವೇಳೆ ಮಹಿಳಾ ಅಭ್ಯರ್ಥಿಗಳು ಅರ್ಜಿಸಲ್ಲಿಸದೇ ಇದ್ದಲ್ಲಿ, ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಯನ್ನು ಹಂಚಿಕೆ ಮಾಡಲಾಗುವುದು.

## II. ಅರ್ಜಿ ಸಲ್ಲಿಸುವ ವಿಧಾನ:

ನಿಗದಿತ ನಮೂನೆಯ ಅರ್ಜಿ ಹಾಗೂ ಮಾಹಿತಿ/ಸೂಚನೆಗಳನ್ನು ಚಿಕ್ಕಬಳ್ಳಾಪುರ ಜಿಲ್ಲಾ ಆಡಳಿತದ ಅಧಿಕೃತ ವೆಬ್‌ಸೈಟ್ http://www.chikballapur.nic.in/ ನಲ್ಲಿ ದಿನಾಂಕ 25.06.2018 ರಂದು ಪ್ರಕಟಿಸಲಾಗುವುದು. ಅರ್ಜಿ ನಮೂನೆಯನ್ನು ಅಭ್ಯರ್ಥಿಗಳು ಸದರಿ ವೈಬ್‌ಸೈಟ್‌ನಿಂದ ದಿನಾಂಕ: 25.06.2018 ರಿಂದ 24.07.2018 ರೊಳಗೆ ಪಡೆದು ಪಾಸಪೋರ್ಟ್ ಅಳತೆಯ-2 ಬಣ್ಣದ ಇತ್ತೀಚಿನ ಭಾವಚಿತ್ರ ಹಾಗೂ ಸಹಿಯೊಂದಿಗೆ ಅರ್ಜಿಯಲ್ಲಿರುವ ಎಲ್ಲಾ ವಿವರಗಳನ್ನು ಸಮರ್ಪಕವಾಗಿ ಭರ್ತಿ ಮಾಡಿ ದ್ವಿಪ್ರತಿಯೊಂದಿಗೆ ***ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಎಸ್.ಬಿ-2, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಕಛೇರಿಗೆ*** ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08156-277041 ಗೆ ಸಂಪರ್ಕಿಸಬಹುದಾಗಿದೆ.

- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:25.06.2018, ಬೆಳಗ್ಗೆ:10.00 ಗಂಟೆಯಿಂದ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.07.2018, ಸಂಜೆ:05.00 ಗಂಟೆ ವರೆಗೆ

## III. ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು ( ಕ್ರಮಬದ್ಧವಾಗಿ 1 ರಿಂದ 14 ರ ವರೆಗಿನ ದಾಖಲೆಗಳನ್ನು ಲಗತ್ತಿಸುವುದು)

1. ಜಿಲ್ಲಾಧಿಕಾರಿಗಳಿಂದ ಜಾಹಿರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ, **ದ್ವಿಪ್ರತಿ** ಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
2. ಅರ್ಜಿದಾರರ ಹೆಸರು ಇರುವ ಪಡಿತರ ಚೀಟಿ(**ಬಿ.ಪಿ.ಎಲ್. ಕಾರ್ಡ ಹೊಂದಿದವರಿಗೆ ಮೊದಲ ಆದ್ಯತೆ**) ಹಾಗೂ ಆಧಾರ ಕಾರ್ಡ ಪ್ರತಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
3. ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ನಿಗದಿತ ಜಾತಿ ಪ್ರಮಾಣ ಪತ್ರದ ಪ್ರತಿ.
4. ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರದ ಪ್ರತಿ.
5. ಅರ್ಜಿದಾರರು ಕಡ್ಡಾಯ ಚಿಕ್ಕಬಳ್ಳಾಪುರ ಜಿಲ್ಲೆಯವರಾಗಿರುವುದಕ್ಕೆ ಪುರಾವೆಯಾಗಿ ತಹಶೀಲ್ದಾರ್ / ಮಹಾನಗರ ಪಾಲಿಕೆ / ನಗರ ಪಾಲಿಕೆ / ನಗರ ಸಭೆ / ಪುರಸಭೆ / ಗ್ರಾಮಪಂಚಾಯತಿ / ಪಟ್ಟಣ ಪಂಚಾಯತಿ ಇವುಗಳಲ್ಲಿ ಅರ್ಜಿದಾರರಿಗೆ ಅನ್ವಯಿಸುವ ವಾಸಸ್ಥಳ ಪ್ರಮಾಣ ಪತ್ರದ ಪ್ರತಿ.
6. ಖಾಯಂ ಲಘುವಾಹನ ಚಾಲನಾ ಪರವಾನಗಿ ಪತ್ರ, ಎಲ್.ಎಂ.ವಿ ಕ್ಯಾಬ್ (LMV CAB) ಹಾಗೂ ಆರ್.ಟಿ.ಓ(RTO) ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರ್ಯಾಕ್ಟ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.
7. ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ ಕಡ್ಡಾಯವಾಗಿ ಲಗತ್ತಿಸಬೇಕು.
8. ಅರ್ಜಿದಾರರು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದ ಬಗ್ಗೆ, ಚಿಕ್ಕಬಳ್ಳಾಪುರ ಮಹಾನಗರ ಪಾಲಿಕೆ/ನಗರ ಸಭೆ / ಪುರಸಭೆ/ಗ್ರಾಮಪಂಚಾಯತಿ/ಪಟ್ಟಣ ಪಂಚಾಯತಿ ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ – ಸ್ವಯಂ ಪ್ರಮಾಣೀಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ(Affidavit)ದಲ್ಲಿ ನಮೂನೆ-03 ರಂತೆ ಮುಚ್ಚಳಿಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
9. ಈಗಾಗಲೇ **ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಲಾಗುವುದಿಲ್ಲ**. ಒಂದು ವೇಳೆ ಆ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಈ ಸಂಬಂಧ ಅಭ್ಯರ್ಥಿಯ ಪಡಿತರ ಚೀಟಿಯನ್ನು ಆಧಾರದೊಂದಿಗೆ ಸಲ್ಲಿಸತಕ್ಕದ್ದು.
10. ಅರ್ಜಿಯಲ್ಲಿ ಅಭ್ಯರ್ಥಿಗಳು ದೂರವಾಣಿ ಸಂಖ್ಯೆ ನಮೂದಿಸುವುದು ಕಡ್ಡಾಯವಾಗಿರುತ್ತದೆ.
11. ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೋಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವುದು.
12. ಅರ್ಜಿದಾರನು ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
13. ಆಯ್ಕೆಯಾದ ನಂತರ ಅಭ್ಯರ್ಥಿಗಳು ಪಡೆಯುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿದ ರೂ: 50/-ರ ಬೆಲೆಯ ಮುಚ್ಚಳಿಕೆ ಪತ್ರವನ್ನು ಸಲ್ಲಿಸುವುದು.
14. ಅರ್ಜಿದಾರರು ತಮ್ಮ ಖಾಯಂ ನಿವಾಸದ ಸರ್ವಿಸ್ ಬ್ಯಾಂಕಿನಲ್ಲೇ ಖಾತೆ ಹೊಂದಿರಬೇಕು, ಅದರ ಪಾಸ್ ಪುಸ್ತಕ ಪ್ರತಿಯನ್ನು ಲಗತ್ತಿಸಬೇಕು.

## IV. ಷರತ್ತುಗಳು:

1. **ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಚಲಾಯಿಸಬೇಕು ಮತ್ತು 5 ವರ್ಷಗಳವರೆಗೆ ಬೇರೆಯವರಿಗೆ ಪರಭಾರೆ ಮಾಡುವಂತಿಲ್ಲ**. ಒಂದು ವೇಳೆ ಪರಭಾರೆ ಮಾಡಿರುವುದು ಕಂಡುಬಂದಲ್ಲಿ ಆರ್.ಟಿ.ಓ ರವರಿಂದ ಟ್ಯಾಕ್ಸಿ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ವಹಿಸಲಾಗುವುದು.
2. ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರವನ್ನು ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಇಲಾಖೆಯ ಕಛೇರಿಗೆ ನೀಡುವುದು ಕಡ್ಡಾಯವಾಗಿರುತ್ತದೆ.
3. ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರು ಪಾವತಿ ಮಾಡುವುದು, ತಪ್ಪಿದ್ದಲ್ಲಿ ಸಂಬಂಧಿಸಿದ ಬ್ಯಾಂಕನವರಿಗೆ ಪ್ರವಾಸಿ ಟ್ಯಾಕ್ಸಿ ಮುಟ್ಟುಗೋಲು ಹಾಕಲು ಸೂಚಿಸಲಾಗುವುದು.
4. ಫಲಾನುಭವಿಗಳು ಖರೀದಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಕೆ(Hypothecation) ಮಾಡಿಕೊಳ್ಳತಕ್ಕದ್ದು.
5. ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡುವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರೆ ಭಾಷೆಗಳ ಪರಿಣಿತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿರಬೇಕು.
6. ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ವಾಹನದ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ, **"ಪ್ರವಾಸೋದ್ಯಮ ಇಲಾಖೆಯ ನೆರವು"** ಎಂದು ಚಿತ್ತರಿಸುವುದು ಹಾಗೂ ಬ್ರಾಂಡಿಂಗ್ ಬಗ್ಗೆ ಸರ್ಕಾರದ ಮುಂದಿನ ಆದೇಶಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

## V. ಆಯ್ಕೆ ವಿಧಾನ

1. ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ:-

$$\text{ಸೂತ್ರ} = \frac{\text{ಅಭ್ಯರ್ಥಿಯ ವಯಸ್ಸು} \times 100}{\text{ನಿಗದಿಪಡಿಸಿದ ವಯಸ್ಸು}(40)}$$

$$= \frac{\text{ಬರುವ ಫಲಿತಾಂಶ} \times 60}{100} = \text{ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ}$$

[A]

2. ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ :-

$$\text{ಸೂತ್ರ} = \frac{\text{ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯ ಪಡೆದ ಒಟ್ಟು ಅಂಕಗಳ ಶೇಕಡ} \times 100}{\text{ನಿಗದಿಪಡಿಸಿದ ಅಂಕದ ಮಿತಿ } (45\%)}$$

$$= \frac{\text{ಬರುವ ಫಲಿತಾಂಶ} \times 40}{100} = \text{ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ}$$

[B]

ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ **[A]** + ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ **[B]**

= ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ(Descending Order) ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆಯ ಮಾನದಂಡವನ್ನಾಗಿಸಿಕೊಂಡು, ವಿಜಯಪುರ ಜಿಲ್ಲೆಗೆ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಟ್ಟು "10 "ಅರ್ಹ ನಿರುದ್ಯೋಗಿ ಯುವಕ / ಯುವತಿಯರಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಗರಿಷ್ಠ **ರೂ. 3.00 ಲಕ್ಷಗಳ** ಸಹಾಯಧನ ಸೌಲಭ್ಯ ಪಡೆಯುವ ಯೋಜನೆಗೆ ಆಯ್ಕೆ ಮಾಡಲಾಗುತ್ತದೆ.

## VI. ಆಯ್ಕೆ ಸಮಿತಿ

ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ

i. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ – ಅಧ್ಯಕ್ಷರು
ii. ತಹಶೀಲ್ದಾರರು, ಚಿಕ್ಕಬಳ್ಳಾಪುರ – ಸದಸ್ಯರು
iii. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಬಳ್ಳಾಪುರ – ಸದಸ್ಯರು
iv. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ (ಡಿ.ಒ.ಬಿ.ಸಿ), ಚಿಕ್ಕಬಳ್ಳಾಪುರ – ಸದಸ್ಯರು
v. ಪ್ರಾದೇಶಿಕ ಸಾರಿಗೆ ಅಧಿಕಾರಿ, ಚಿಕ್ಕಬಳ್ಳಾಪುರ – ಸದಸ್ಯರು
vi. ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಿಕ್ಕಬಳ್ಳಾಪುರ – ಸದಸ್ಯರು
vii. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಚಿಕ್ಕಬಳ್ಳಾಪುರ – ಸದಸ್ಯ ಕಾರ್ಯದರ್ಶಿಗಳು

ಸಹಿ/-
**(ದೀಪ್ತಿ ಆದಿತ್ಯ ಕಾನಡೆ ಭಾ.ಆ.ಸೇ)**
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ
ಚಿಕ್ಕಬಳ್ಳಾಪುರ

**ಪ್ರತಿಯನ್ನು:**

1. ಮಾನ್ಯ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ರವರ ಆದ್ಯ ಅವಗಾಹನೆಗಾಗಿ ಸಲ್ಲಿಸಿದೆ.
2. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ, ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ತಹಸೀಲ್ದಾರರು, ಚಿಕ್ಕಬಳ್ಳಾಪುರ ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಮಾಹಿತಿಗಾಗಿ ಸಲ್ಲಿಸಿದೆ.
5. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ (ಡಿ.ಒ.ಬಿ.ಸಿ) ಚಿಕ್ಕಬಳ್ಳಾಪುರ ಇವರ ಮಾಹಿತಿಗಾಗಿ ಸಲ್ಲಿಸಿದೆ.
6. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಚಿಕ್ಕಬಳ್ಳಾಪುರ ಇವರ ಮಾಹಿತಿಗಾಗಿ ಸಲ್ಲಿಸಿದೆ.
7. ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಿಕ್ಕಬಳ್ಳಾಪುರ ಇವರ ಮಾಹಿತಿಗಾಗಿ ಸಲ್ಲಿಸಿದೆ.
8. ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಜಿಲ್ಲೆಯ ಪ್ರಮುಖ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಸೂಚಿಸಿದೆ.
9. ಜಿಲ್ಲಾ ಮಾಹಿತಿ ಮತ್ತು ಸೂಚನಾಧಿಕಾರಿಗಳು, ಜಿಲ್ಲಾ ಮಾಹಿತಿ ಮತ್ತು ಸೂಚನಾ ಕೇಂದ್ರ(NIC) ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಯನ್ನು ಜಿಲ್ಲಾ ಆಡಳಿತದ ಅಧಿಕೃತ ವೆಬ್‌ಸೈಟ್ http://www.chikballapur.nic.in/ ನಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಿದೆ.

# ನಮೂನೆ-3

**First Party-Candidate Name**
**Second Party- Deputy Commissioner & Chairman, District Tourism Development Committee (DTDC), Chickballapur District.**

**ರೂ. 50 ಛಾಪಾ ಕಾಗದ**

## ಸ್ವಯಂ ದೃಢೀಕರಣ ಪತ್ರ

ಇವರಿಗೆ
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ,
ಚಿಕ್ಕಬಳ್ಳಾಪುರ.

ಶ್ರೀ/ಶ್ರೀಮತಿ/ಕುಮಾರಿ
ತಂದೆ/ಗಂಡನಹೆಸರು ಆದನಾನು ಮನೆನಂ. ಆದಾರ್ ಕಾರ್ಡ್‌ನಂ ಗ್ರಾಮ, ಹೋಬಳಿ, ತಾಲ್ಲೂಕು ಜಿಲ್ಲೆಯಲ್ಲಿ ವಾಸಿಯಾಗಿದ್ದು, ಈ ಕೆಳಕಂಡ ಸೌಲಭ್ಯಗಳನ್ನು ಪಡೆದಿರುವುದಿಲ್ಲವೆಂದು ಹಾಗೂ ಇದು ಸತ್ಯವೆಂದು ಪ್ರಮಾಣಿಕರಿಸಿ, ಈ ಕೆಳಕಂಡಂತೆ ಸ್ವಯಂ ದೃಢೀಕರಿಸುತ್ತೇನೆ.

ಪ್ರಮಾಣಿಕರಿಸಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ ಏನೆಂದರೆ, ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗ ದವರಿಗೆ ಸರ್ಕಾರವು ಒದಗಿಸಿರುವ 2018-19ನೇ ಸಾಲಿನ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಯೋಜನೆಯಡಿಯಲ್ಲಿ ಅರ್ಜಿಯಲ್ಲಿ ನಾನು ಒದಗಿಸಿರುವ ದಾಖಲಾತಿಗಳಲ್ಲಿ ಯಾವುದೇ ತೆರನಾದ ಸುಳ್ಳು, ಅಪೂರ್ಣ ಮಾಹಿತಿಗಳು ಇರುವುದಿಲ್ಲವೆಂದು ಪ್ರಮಾಣಿಕರಿಸುತ್ತಾ, ಒಂದು ವೇಳೆ ಮಾಹಿತಿ ದಾಖಲಾತಿಗಳಿದ್ದಲ್ಲಿ ಆ ಬಗ್ಗೆ ಅದಕ್ಕೆ ನಾನು ಸಂಪೂರ್ಣ ಹೊಣೆಗಾರನಾಗಿದ್ದು, ಸರ್ಕಾರವು ವಿಧಿಸುವ ಶಿಕ್ಷೆ, ದಂಡ ಇವುಗಳಿಗೆ ನಾನು ಬದ್ದನಾಗಿರುತ್ತೇನೆ.

1. ನಾನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿಲ್ಲವೆಂದು
2. ನನ್ನ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿರುವುದಿಲ್ಲ.
3. ನಾನು ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿ- ಇವುಗಳಿಂದ ಸ್ವ-ಉದ್ಯೋಗ ಕಲ್ಪಿಸಿಕೊಳ್ಳುವ ಯಾವುದೇ ಸಹಾಯಧನದ ಸೌಲಭ್ಯ ಪಡೆದಿರುವುದಿಲ್ಲ.
4. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ/ಜಿಲ್ಲಾ ವಕ್ಫ್ ಕಚೇರಿ/ಜಿಲ್ಲಾ ಕೈಗಾರಿಕ ಕೇಂದ್ರ, ಯಾವುದೇ ರೀತಿಯ ಸಹಾಯಧನವನ್ನು ಪಡೆದಿರುವುದಿಲ್ಲ.
5. ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಯೋಜನೆಯಡಿ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುಲು ನೀಡುವ ಯಾವುದೇ ರೀತಿಯ ಸಹಾಯಧನದ ಸಾಲ ಸೌಲಭ್ಯವನ್ನು ಯಾವುದೇ ಇಲಾಖೆಯಿಂದ ಪಡೆದಿರುವುದಿಲ್ಲ.
6. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಯಾವುದೇ ಇಲಾಖೆಯಲ್ಲಿ ಯಾವುದೇ ರೀತಿಯ ಸಹಾಯಧನವನ್ನು ಪಡೆದಿರುವುದಿಲ್ಲ.

ದಿನಾಂಕ:
ಸ್ಥಳ: (ಅರ್ಜಿದಾರರ ಸಹಿ ಮತ್ತು ಹೆಸರು)

ಈ ಮೇಲ್ಕಂಡ ಮಾದರಿ ಮುಚ್ಚಳಿಕೆ ಪತ್ರವನ್ನು ರೂ.50/-ಛಾಪಾ ಕಾಗದ(Affidavit)ದಲ್ಲಿ ಟೈಪ್ ಮಾಡಿಸಿ ಸಹಿ ಮಾಡಿ ಈ ಕಛೇರಿ ಸಲ್ಲಿಸಲು ಸೂಚಿಸಲಾಗಿದೆ.